ಕಥೆ

# ಬೆಳಕು ಬೇಗುದಿ




## ಪ್ರೊ. ಎಚ್.ಟಿ. ಪೋತೆ

ಕಲೆ: ಎಸ್.ವಿ. ಹೂಗಾರ್




‘ಅಂಬವ್ವ ನಿತ್ಯ ಸೂರ್ಯ ಹುಟ್ಟುವ ಮೊದಲು ಮನೆಗೆಲಸ ಮುಗಿಸುತ್ತಿದ್ದಳು. ಕೇರಿಯಲ್ಲಿ ಯಾರೂ ಎಂದೂ ಅಂಬವ್ವ ಏಳುವ ಮೊದಲು ಎದ್ದದ್ದು ನಾ ಕಾಣೆ’ ಎಂದು ಪಕ್ಕದ ಮನೆಯ ಅಜ್ಜಿಯೊಬ್ಬಳು ವಟವಟ ಅನ್ನುತ್ತಿದ್ದಳು.

‘ಇವಳದು ಇದೇ ಆತು. ಯಾವಾಗ ನೋಡಿದ್ರ ಅಂಬವ್ವನ ಮಾತೇ ಆಡ್ತಾಳ, ಹೋದಾಗ-ಬಂದಾಗ ಇಕೀಗಿ ಮುಸುರಿ ಹಾಕತಾಳಲ್ಲ ಅದಕ್ಕ ಮಾತಾಡ್ತಾಳ’ ಎನ್ನುತ್ತ ಕೂತವಳು ಎದ್ದು ಕೈಯಲ್ಲಿದ್ದ ಕಸಬರಿಗೆಯನ್ನು ಲಗಸೆವ್ವ ನೆಲಕ್ಕೆ ಬೀಸಿದಳು. ಸಿಟ್ಟಿನಿಂದ ಬೀಸಿದ್ದರಿಂದ ಕಸಬರಿಗಿ ಕಡ್ಡಿಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದವು.

‘ಏನ ಲಗಸೆವ್ವ ಮುಂದ ನೋಡಿ ಕಸಾ ಗುಡುಸೊದು ಬಿಟ್ಟು ಹಾದಿಗಿ ಹೋಗೌರ ಮಾತ ಕೇಳಕೋತು ನಿಂದ್ರತಿಯೇನ? ಆಕಿ ಊರ ಸೂಳಿ, ಊರ ಸೂಳಿ ಅದಾಳ, ಹತ್ತಾರು ಸಂಸಾರ ಹರದಾಳ. ಚಿತ್ತ ಚಿಪಾಟಿ ಮ್ಯಾಲ ಧ್ಯಾನ...! ಎದರ ಮ್ಯಾಲ ಅಂತಾರಲ್ಲ ಹಂಗಾತು ನಿನ್ನ ಬಾಳ್ವೆ. ಮುಂದ ನೋಡಿ ಕಸಾ ಗುಡುಸು’ ಎಂದು ಅತ್ತಿ ರೇವಣವ್ವ ಸೊಸಿಗೆ ಬೈದಳು.

‘ಇದರ ಬಾಯಾಗ ಮಣ್ಣು, ಯಾವಾಗ ಮೂಳಾ ಮುರಕೊಂಡು ಹೋಗ್ತದೊ, ಇದರ ವ್ಯಾಳ್ಯಾರೆ ಯಾವಾಗ ಬರ್ತದೊ’ ಎಂದು ಮನಸ್ಸಿನೊಳಗೆ ಲಗಸೆವ್ವ ಶಪಿಸಿದಳು.

‘ಅಂಬವ್ವನಂಗ ಆಗಬೇಕಾದ್ರ ನೀ ಮತ್ತ ಹುಟ್ಟಿ ಬರಬೇಕು’ ಎಂದು ಹೇಳಿದ ರೇವಣವ್ವ ಎದ್ದು ಹೋಗಿ ಎಮ್ಮಿಗೆ ಮೇವು ಹಾಕಿದಳು.

‘ನೋಡವಾ ನಿಮ್ಮತ್ತಿ ನನಗ ಬೈಯಾಕತ್ತ್ಯಾಳ ನಾ